# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 403 |
| ಸದಸ್ಯರ ಹೆಸರು | : | ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಎಸ್ಕಾಂಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; ಕಳೆದ 5 ವರ್ಷಗಳ ಎಸ್ಕಾಂಗಳ ವಾರ್ಷಿಕ ಲಾಭ-ನಷ್ಟದ ಪ್ರಮಾಣ ಎಷ್ಟು; (ವರ್ಷವಾರು, ಎಸ್ಕಾಂವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 5 ಎಸ್ಕಾಂಗಳಿದ್ದು ವಿವರ ಕೆಳಗಿನಂತಿದೆ. |

| | |
|---|---|
| ಬೆಸ್ಕಾಂ | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| ಮೆಸ್ಕಾಂ | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| ಸೆಸ್ಕ್ | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ |
| ಹೆಸ್ಕಾಂ | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ |
| ಜೆಸ್ಕಾಂ | ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ |

ಕಳೆದ 5 ವರ್ಷಗಳ ಎಸ್ಕಾಂಗಳ ವಾರ್ಷಿಕ ಲಾಭ-ನಷ್ಟದ ಪ್ರಮಾಣದ ವಿವರಗಳು ಕೆಳಗಿನಂತಿವೆ.

ಲಾಭ-ನಷ್ಟ ರೂ. ಕೋಟಿಗಳಲ್ಲಿ

| ಆರ್ಥಿಕ ವರ್ಷ | ಬೆಸ್ಕಾಂ | ಮೆಸ್ಕಾಂ | ಸೆಸ್ಕ್ | ಹೆಸ್ಕಾಂ | ಜೆಸ್ಕಾಂ |
|---|---|---|---|---|---|
| 2018-19 | 84.77 | 56.39 | -209.35 | 689.99 | 319.77 |
| 2019-20 | 146.51 | 43.57 | -366.63 | -682.21 | -987.58 |
| 2020-21 | 28.25 | -52.97 | -723.19 | -2490.26 | -1116.69 |
| 2021-22 | -2919.54 | 32.70 | -422.84 | -1293.63 | 11.12 |
| 2022-23 (Prov) | -164 .12 | 151.53 | -209.49 | -7.78 | 13. 4 |

| | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿರುವ ಒಟ್ಟು ಗೃಹ ಬಳಕೆಯ ಸಂಪರ್ಕಗಳೆಷ್ಟು ಹಾಗೂ ವಿದ್ಯುತ್ ರಹಿತ ಕುಟುಂಬಗಳೆಷ್ಟು; | ರಾಜ್ಯದಲ್ಲಿರುವ ಒಟ್ಟು ಗೃಹ ಬಳಕೆಯ ಸಂಪರ್ಕ ಹಾಗೂ ವಿದ್ಯುತ್ ರಹಿತ ಕುಟುಂಬಗಳ ವಿವರಗಳು ಕೆಳಗಿನಂತಿವೆ. |

| ವಿವರ | ಬೆಸ್ಕಾಂ | ಮೆಸ್ಕಾಂ | ಸೆಸ್ಕ್ | ಹೆಸ್ಕಾಂ | ಜೆಸ್ಕಾಂ |
|---|---|---|---|---|---|
| ಗೃಹ ಬಳಕೆ ಸಂಪರ್ಕಗಳ ಸಂಖ್ಯೆ | 88,50,516 | 18,95,552 | 27,29,030 | 35,73,587 | 26,57,568 |
| ವಿದ್ಯುತ್ ರಹಿತ ಕುಟುಂಬಗಳ ಸಂಖ್ಯೆ | 0 | 821 | 169 | 250 | 0 |

ಹೊಸದಾಗಿ ನಿರ್ಮಾಣವಾಗುವ ಮನೆಗಳ ಗೃಹ ಬಳಕೆಗೆ ವಿದ್ಯುತ್ ಸಂಪರ್ಕ ಒದಗಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ Conditions of Supply ಅನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

...2

| | | |
|---|---|---|
| ಇ) | ಗೃಹ ಜ್ಯೋತಿ ಯೋಜನೆಯಡಿ ವಿಧಿಸಿರುವ ವಾರ್ಷಿಕ ಸರಾಸರಿಯೊಂದಿಗೆ ಶೇ.10ರ ಹೆಚ್ಚುವರಿ ಮಿತಿಯನ್ನು ರದ್ದುಗೊಳಿಸಿ, ಎಲ್ಲಾ ಗೃಹ ಬಳಕೆಯ ಸಂಪರ್ಕಗಳಿಗೆ ಏಕರೂಪದ ಉಚಿತ 200 ಯೂನಿಟ್ ವಿದ್ಯುತ್ ನೀಡುವ ಕುರಿತು ಸರ್ಕಾರದ ನಿಲುವೇನು; | ರಾಜ್ಯದಲ್ಲಿನ ಗೃಹ ಬಳಕೆದಾರರು 2022-23 ರ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿದ ಸರಾಸರಿ ವಿದ್ಯುತ್ ಬಳಕೆಯ ಮೇಲೆ ಶೇ.10 ರಷ್ಟು ಹೆಚ್ಚಿನ ವಿದ್ಯುತ್ ಬಳಕೆಯ ಮಿತಿಯನ್ನು ಅನುಮತಿಸಿ ಮಾಸಿಕ 200 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ಒದಗಿಸಲು ಸರ್ಕಾರವು ತೀರ್ಮಾನಿಸಿದೆ. |
| ಈ) | ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 164/ಪಿಎಸ್‌ಆರ್ 2023 ದಿನಾಂಕ 05.06.2023 ರ ಆದೇಶದಲ್ಲಿ ಗೃಹ ಜ್ಯೋತಿ ಯೋಜನೆಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿನ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಠ 200 ಯುನಿಟ್‌ಗಳವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರಿಗೆ ಮಾಸಿಕ ಸರಾಸರಿ ಬಳಕೆಯ (ಆರ್ಥಿಕ ವರ್ಷ 2022-23 ರ ಬಳಕೆಯ ಆಧಾರದನ್ವಯ) ಯುನಿಟ್‌ಗಳ ಮೇಲೆ ಶೇ 10 ರಷ್ಟು ಹೆಚ್ಚಿನ ಬಳಕೆಯ ಮಿತಿಯನ್ನು ಅನುಮತಿಸಿ ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು ಹಾಗೂ ಜುಲೈ 2023 ರ ತಿಂಗಳ ವಿದ್ಯುತ್ ಬಳಕೆಗೆ ಆಗಸ್ಟ್ 2023 ರ ತಿಂಗಳಿಂದ ನೀಡುವ ಬಿಲ್ಲಿಗೆ ಅನ್ವಯವಾಗುವಂತೆ ಆದೇಶಿಸಿದೆ. |

ಸಂಖ್ಯೆ: ಎನರ್ಜಿ 142 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು